<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 407
ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 18.02.2022.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಸಾರಿಗೆ ಇಲಾಖೆಯ ಅಧೀನದಲ್ಲಿ ಎಷ್ಟು ನಿಗಮ/ ಮಂಡಳಿಗಳು ಕಾರ್ಯ ನಿರ್ವಹಿಸುತ್ತಿವೆ; ಸದರಿ ನಿಗಮ/ ಮಂಡಳಿಗಳಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; (ವೃಂದವಾರು ವಿವರ ನೀಡುವುದು)</td><td>ಸಾರಿಗೆ ಇಲಾಖೆಯ ಅಧೀನದಲ್ಲಿ ನಾಲ್ಕೂ ನಿಗಮಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ನಿಗಮಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಈ ಕೆಳಕಂಡಂತಿದೆ:
<table>
<tr><th>ನಿಗಮ</th><th>ವೃಂದ-ಎ</th><th>ವೃಂದ-ಬಿ</th><th>ವೃಂದ-ಸಿ</th><th>ವೃಂದ-ಡಿ</th><th>ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ</th></tr>
<tr><td>ಕ.ರಾ.ರ.ಸಾ. ನಿಗಮ</td><td>186</td><td>226</td><td>41152</td><td>597</td><td>42161</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>64</td><td>84</td><td>35212</td><td>98</td><td>35458</td></tr>
<tr><td>ವಾ.ಕ.ರ.ಸಾ. ಸಂಸ್ಥೆ</td><td>77</td><td>152</td><td>24227</td><td>355</td><td>24811</td></tr>
<tr><td>ಕ.ಕ.ರ.ಸಾ.ನಿಗಮ</td><td>98</td><td>150</td><td>21176</td><td>323</td><td>21747</td></tr>
<tr><td>ಒಟ್ಟು</td><td>425</td><td>612</td><td>121767</td><td>1373</td><td>124177</td></tr>
</table></td></tr>
<tr><td>ಆ.</td><td>ಅವುಗಳಲ್ಲಿ ಖಾಯಂ ಗುತ್ತಿಗೆ ಆಧಾರದ ಮೇಲೆ ಮತ್ತು ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು;</td><td>ರಾಜ್ಯದ ನಾಲ್ಕೂ ಸಾರಿಗೆ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಮತ್ತು ದಿನಗೂಲಿ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಈ ಕೆಳಕಂಡಂತಿದ್ದು, ಖಾಯಂ ಗುತ್ತಿಗೆ ಆಧಾರದ ಮೇಲೆ ಯಾವುದೇ ಸಿಬ್ಬಂದಿಯನ್ನು ನಿಯೋಜಿಸಿರುವುದಿಲ್ಲ.
<table>
<tr><th>ನಿಗಮ</th><th>ಗುತ್ತಿಗೆ/ ಹೊರಗುತ್ತಿಗೆ</th><th>ದಿನಗೂಲಿ</th></tr>
</table></td></tr>
</table>

| | |
|---|---|
| ಕ.ರಾ.ರ.ಸಾ.ನಿಗಮ | 1 | 11 |
| ಬೆಂ.ಮ.ಸಾ.ಸಂಸ್ಥೆ | 0 | 0 |
| ವಾ.ಕ.ರ.ಸಾ.ಸಂಸ್ಥೆ | 0 | 0 |
| ಕ.ಕ.ರ.ಸಾ.ನಿಗಮ | 13 | 0 |
| ಒಟ್ಟು | **14** | **11** |

ಇ. ಪ್ರಸ್ತುತ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; (ವೃಂದವಾರು ವಿವರ ನೀಡುವುದು)

ರಾಜ್ಯದ ನಾಲ್ಕೂ ಸಾರಿಗೆ ಸಂಸ್ಥೆಗಳಲ್ಲಿ ಪ್ರಸ್ತುತ ಖಾಲಿಯಿರುವ ವೃಂದವಾರು ಹುದ್ದೆಗಳ ಸಂಖ್ಯೆ ಈ ಕೆಳಕಂಡಂತಿದೆ:

| ನಿಗಮ | ವೃಂದ-ಎ | ವೃಂದ-ಬಿ | ವೃಂದ-ಸಿ | ವೃಂದ-ಡಿ | ಖಾಲಿಯಿರುವ ಒಟ್ಟು ಹುದ್ದೆಗಳ ಸಂಖ್ಯೆ |
|---|---|---|---|---|---|
| ಕ.ರಾ.ರ.ಸಾ.ನಿಗಮ | 41 | 33 | 5913 | 41 | **6028** |
| ಬೆಂ.ಮ.ಸಾ.ಸಂಸ್ಥೆ | 03 | 23 | 5570 | 18 | **5614** |
| ವಾ.ಕ.ರ.ಸಾ.ಸಂಸ್ಥೆ | 05 | 56 | 2764 | 31 | **2856** |
| ಕ.ಕ.ರ.ಸಾ.ನಿಗಮ | 27 | 72 | 2253 | 17 | **2369** |
| ಒಟ್ಟು | **76** | **184** | **16500** | **107** | **16867** |

ಈ. ಖಾಲಿಯಿರುವ ಹುದ್ದೆಗಳನ್ನು ನೇಮಕ ಮಾಡಲು ಕ್ರಮಕೈಗೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಸದರಿ ನೇಮಕಾತಿ ಪ್ರಕ್ರಿಯೆಗಳು ಪ್ರಸ್ತುತ ಯಾವ ಹಂತದಲ್ಲಿವೆ ಮತ್ತು ಯಾವ ಕಾಲಮಿತಿಯಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದು;

ರಾಜ್ಯದ ನಾಲ್ಕೂ ನಿಗಮಗಳಲ್ಲಿ ವೃಂದ-ಎ, ಬಿ ಮತ್ತು ಸಿ (ಮೇಲ್ವಿಚಾರಕ) ಹುದ್ದೆಗಳ ವೃಂದ ನಿಯಂತ್ರಣಾ ಪ್ರಾಧಿಕಾರವು ಕ.ರಾ.ರ.ಸಾ.ನಿಗಮ ಆಗಿರುವುದರಿಂದ, ಸದರಿ ಹುದ್ದೆಗಳ ನೇರ ನೇಮಕಾತಿ/ ಮುಂಬಡ್ತಿಗಳನ್ನು ಕ.ರಾ.ರ.ಸಾ.ನಿಗಮದಿಂದ ಭರ್ತಿ ಮಾಡಬೇಕಾಗಿರುತ್ತದೆ.

ಖಾಲಿ ಇರುವ ಹುದ್ದೆಗಳ ಪೈಕಿ ಮುಂಬಡ್ತಿಗೆ ಮೀ

| | | |
|---|---|---|
| ಊ. | ಇಲ್ಲವಾದಲ್ಲಿ, ನೇಮಕಾತಿ ಮಾಡಿಕೊಳ್ಳದಿರಲು ಕಾರಣಗಳೇನು? | ಸಲಾದ ಖಾಲಿ ಹುದ್ದೆಗಳನ್ನು ಸಂಸ್ಥೆಯ ಅಗತ್ಯತೆಗನುಗುಣವಾಗಿ ತುಂಬಲಾಗುತ್ತಿದೆ.<br><br>ಕೋವಿಡ್-19ರ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯು ನಿರ್ಬಂಧದನ್ವಯ ನೇರ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ.<br><br>**ಕ.ರಾ.ರ.ಸಾ.ನಿಗಮ**<br><br>ನೇರ ನೇಮಕಾತಿಗೆ ಮೀಸಲಿರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕೈಗೊಂಡಿರುವ ಕ್ರಮದ ವಿವರ ಈ ಕೆಳಕಂಡಂತಿದೆ: |

| ಜಾಹೀರಾತು ಸಂಖ್ಯೆ | ನೇಮಕಾತಿ ಹುದ್ದೆ/ ಸಂಖ್ಯೆ | ಷರಾ |
|---|---|---|
| 1/2018 ದಿ:17-03-2018 | ತಾಂತ್ರಿಕ ಸಹಾಯಕ 726 | ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ನಡೆಸಿ ಅಂಕಗಳನ್ನು ಪ್ರಕಟಿಸಲಾಗಿದೆ. ಮೂಲ ದಾಖಲಾತಿ/ ದೇಹದಾರ್ಢ್ಯತೆ ಪರಿಶೀಲನೆಗೆ ಬಾಕಿ ಇರುತ್ತದೆ. |
| 2/2018 ದಿ:12-06-2018 | ಭದ್ರತಾ ರಕ್ಷಕ 200 | ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ನಡೆಸಿ ಅಂಕಗಳನ್ನು ಪ್ರಕಟಿಸಲಾಗಿದೆ. ಮೂಲ ದಾಖಲಾತಿ, ದೇಹದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಗಾಗಿ ಬಾಕಿ ಇರುತ್ತದೆ. |
| 1/2020 ದಿ:14-02-2020 | ದಿ:14-02-2020 ಚಾಲಕ 1200 ಚಾ/ನಿ 2545 | ಜಾಹೀರಾತು ಪ್ರಕಟಿಸಿ, ಆನ್-ಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸಿದ್ದು, ಅವರುಗಳಿಗೆ ಚಾಲನಾ ವೃತ್ತಿ ಪರೀಕ್ಷೆ ನಡೆಸಬೇಕಾಗಿರುತ್ತದೆ. |

ನೇರ ನೇಮಕಾತಿ ಹುದ್ದೆಗಳನ್ನು ತಂಬಿಕೊಳ್ಳಲು ಮೇಲ್ಕಂಡಂತೆ ಜಾಹೀರಾತು ಹೊರಡಿಸಲಾಗಿದ್ದು, ಪ್ರಸ್ತುತ ಕೋವಿಡ್-19ರ ಹಿನ್ನೆಲೆಯಲ್ಲಿ ಎಲ್ಲಾ ನೇರ ನೇಮಕ

ಾತಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

**ಬೆಂ.ಮ.ಸಾ.ಸಂಸ್ಥೆ**

ವೃಂದ-ಸಿ (ಮೇಲ್ವಿಚಾರಕೇತರ) ಮತ್ತು ವೃಂದ-ಡಿ ಗೆ ಸೇರಿದ ಹುದ್ದೆಗಳನ್ನು ಮಾತ್ರ ಬೆಂ.ಮ.ಸಾ.ಸಂಸ್ಥೆಯಲ್ಲಿ ನಿಯಮಾನುಸಾರ ನೇರ ನೇಮಕಾತಿ / ಮುಂಬಡ್ತಿ ಮೂಲಕ ಭರ್ತಿಗೊಳಿಸಲಾಗುತ್ತಿದೆ.

ಕೋವಿಡ್-19ರ ಪೂರ್ವದಲ್ಲಿ 6185 ಅನುಸೂಚಿಗಳನ್ನು ಆಚರಣೆಗೊಳಿಸಲಾಗುತ್ತಿದ್ದು, ಪ್ರಸ್ತುತ ಕೋವಿಡ್-19 ಹಿನ್ನಲೆಯಲ್ಲಿ 5484 ಅನುಸೂಚಿಗಳನ್ನು ಮಾತ್ರ ಆಚರಣೆಗೊಳಿಸಲಾಗುತ್ತಿದೆ. ಪ್ರಸ್ತುತ ಆಚರಣೆಗೊಳಿಸಲಾಗುತ್ತಿರುವ ಅನುಸೂಚಿಗಳಿಗೆ ಅಗತ್ಯವಿರುವ ಪ್ರಮಾಣದಲ್ಲಿ ಸಿಬ್ಬಂದಿಗಳು ಲಭ್ಯವಿರುವುದರಿಂದ ಸಧ್ಯಕ್ಕೆ ಸಿಬ್ಬಂದಿ ನೇಮಕಾತಿ ಅಗತ್ಯತೆ ಇರುವುದಿಲ್ಲ.

ಸಂಸ್ಥೆಯಲ್ಲಿ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡುವ ಸಂದರ್ಭದಲ್ಲಿ ಅಗತ್ಯವಿರುವ ಚಾಲನಾ ಸಿಬ್ಬಂದಿಗಳನ್ನು ಹಾಗೂ ಇತರೆ ವೃಂದಗಳಲ್ಲಿನ ಹುದ್ದೆಗಳನ್ನು, ನಿಯಮಾನುಸಾರ ನೇರ ನೇಮಕಾತಿ ಮೂಲಕ ಭರ್ತಿಗೊಳಿಸಲು ಕ್ರಮ ವಹಿಸಲಾಗುವುದು.

**ವಾ.ಕ.ರ.ಸಾ.ಸಂಸ್ಥೆ**

ಸಂಸ್ಥೆಯಲ್ಲಿ ಪ್ರಸ್ತುತ 2500 ಚಾಲಕ, 55 ಚಾಲಕ ಬ್ಯಾಕ್‌ಲಾಗ್ ಮತ್ತು 259 ಚಾಲಕ ಕಂ ನಿರ್ವಾಹಕ ಬ್ಯಾಕ್‌ಲಾಗ್ ಒಟ್ಟು 2814 ಹುದ್ದೆಗಳ ನೇಮಕಾತಿಗೆ ಜಾಹೀರಾತು ನೀಡಲಾಗಿರುತ್ತದೆ. ಕೋವಿಡ್-19ರ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ.

**ಕ.ಕ.ರ.ಸಾ.ನಿಗಮ**

ಜಾಹೀರಾತು ಸಂಖ್ಯೆ:01/2020ರ ರಡಿಯಲ್ಲಿ 925-ಚಾಲಕ ಹುದ್ದೆ ಮತ್ತು 694-ಚಾಲಕ-ಕಂ-ನಿರ್ವಾಹಕ ಹುದ್ದೆಗಳ ಒಟ್ಟು 2539 ಹುದ್ದೆಗಳ ನೇಮಕಾತಿಗೆ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಕೋವಿಡ್-19ರ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿ

| | | |
|---|---|---|
| | | ತ್ತು. ಕೋವಿಡ್-19ರ ಪ್ರಭಾವ ಕಡಿಮೆಯಾದ ಕಾರಣ ಮೇಲಿನ ಜಾಹೀರಾತಿನಡಿಯಲ್ಲಿನ ಹುದ್ದೆಗಳು ಸೇರಿದಂತೆ 16-ಸಹಾಯಕ ಲೆಕ್ಕಿಗ ಮತ್ತು 300-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಮತ್ತು 59 ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳಲು ಸರ್ಕಾರವು ಅನುಮತಿ ನೀಡಿದ್ದು, ಪ್ರಸ್ತುತ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಸದರಿ ಪ್ರಕ್ರಿಯೆಯನ್ನು ಮುಂದಿನ 14 ತಿಂಗಳುಗಳಲ್ಲಿ ಪೂರ್ಣಗೊಳಿಸಲಾಗುವುದು. |

ಸಂಖ್ಯೆ: ಟಿಡಿ 22 ಟಿಸಿಕ್ಯೂ 2022

(ಬಿ.ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

ಕಲ್ಯಾಣ ಸಚಿವರು